**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ರಾಣೇಬೆನ್ನೂರು.**

**ಸಿಸಿ ನಂಬರಃ 3221/2024**

ಸಿ ಡಬ್ಲ್ಯೂ 2

ಪಿ ಡಬ್ಲ್ಯೂ 4

**ಸಾಕ್ಷಿದಾರರ ಹೆಸರು** : ಗಣೇಶ ಗಡ್ಡೇರ

**ತಂದೆಯ ಹೆಸರು** : ಕುಬೇರಪ್ಪ

**ವಯಸ್ಸು** : 42 ವರ್ಷ

**ಉದ್ಯೋಗ** : ವ್ಯವಸಾಯ

**ವಾಸ** : ಕೋಟಿಹಾಳ .

**ದಿನಾಂಕಃ 17-06-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

1. ನಿಪಿ-2 ರಲ್ಲಿ ನನ್ನ ಸಹಿ ಇದ್ದು, ಅದನ್ನು ಚಾಸಾ-6 ರವರ ಮನೆಯಲ್ಲಿ ದಿಃ 04-04-2023 ರಲ್ಲಿ ಹಾಕಿರುತ್ತೇನೆ. ಪೋಲಿಸರು ಪಂಚನಾಮೆ ಮಾಡಲು ಚಾಸಾ-6 ರವರ ಮನೆಗೆ ಬಂದಿದ್ದು, ಚಾಸಾ-1 ಅವರ ತಂದೆ ಮತ್ತು ತಾಯಿ , ಚಾಸಾ-3 ರವರು ಸಹ ಹಾಜರಿದ್ದರು. ಪೋಲಿಸರು ಸ್ಥಳದಲ್ಲಿ ಪಂಚನಾಮೆ ಬರೆದುಕೊಂಡು ನನ್ನ ಸಹಿ ಪಡೆದಿರುತ್ತಾರೆ. ಈ ಬಗ್ಗೆ ಭಾವಚಿತ್ರವನ್ನು ಸಹ ತೆಗೆದಿರುತ್ತಾರೆ. ಸಾಕ್ಷಿಯು ನಿಪಿ-2 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ-3 ರಂತೆ ಭಾವಚಿತ್ರ ತೆಗೆದಿರುತ್ತಾರೆ.

**ಪಾಟೀ ಸವಾಲುಃ 1 ಹಾಗೂ 2 ನೇ ಆರೋಪಿತರ ಪರ ಶ್ರೀ ಎಂ ಎಸ್ ಎಂ ವಕೀಲರಿಂದಃ**

1. ಮಹಜರ್ ಮಾಡಿದ ಸ್ಥಳದ ಚಕಬಂದಿ ಹೇಳಲು ಬರುತ್ತದೆ. ಪೂರ್ವಕ್ಕೆ ಗೋಡೆ, ಉತ್ತರಕ್ಕೆ ಬಾಗಿಲು, ಪಶ್ಚಿಮಕ್ಕೆ ಮಂಚ , ದಕ್ಷಿಣಕ್ಕೆ ರಸ್ತೆಗೆ ಹೋಗುವ ಬಾಗಿಲಿತ್ತು. ನಿಪಿ-2 ರಲ್ಲಿ ನಾನು ಮನೆಯ ದಕ್ಷಿಣಕ್ಕೆ ಗೇಟ್ ಇತ್ತು ಎಂದು ಹೇಳಿ ಬರೆಸಿರುತ್ತೀರಾ ಎಂದರೆ ಸಾಕ್ಷಿಯು ಪೋಲಿಸರು ಬರೆದಿರುತ್ತಾರೆ ಎಂದು ಹೇಳುತ್ತಾರೆ. ನಿಪಿ-2 ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಅದನ್ನು ಪೋಲಿಸರು ಬರೆದಿರುತ್ತಾರೆ. ಗಂಡ ಹೆಂಡತಿ ಜಗಳ ಆಗಿದೆ ಎಂದು ಪೋಲಿಸರು ಹೇಳಿದ್ದರು. ಆ ರೀತಿ ನನಗೆ ಪೋಲಿಸರು ನನಗೆ ಮಾಹಿತಿ ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಮಾಡುವ ಕಾಲಕ್ಕೆ ನಿಪಿ-3 ರಂತೆ

ಸಿ ಡಬ್ಲ್ಯೂ 2

ಪಿ ಡಬ್ಲ್ಯೂ 4

ಭಾವಚಿತ್ರ ತೆಗೆದಿರುತ್ತಾರೆ. ನಿಪಿ-3 ರಲ್ಲಿ ಯಾವುದೇ ದಿನಾಂಕ ನಮೂದು ಆಗಿಲ್ಲ ಎಂದರೆ ಸರಿ. ಸ್ಥಳ ಪಂಚನಾಮೆ ಮಾಡಲು ಬಂದಾಗ, ನಿಪಿ-3 ರಂತೆ ಭಾವಚಿತ್ರ ತೆಗೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 04-04-2023 ರಂದು ಪಂಚನಾಮೆ ಕಾಲಕ್ಕೆ ನಾನು ಸ್ಥಳದಲ್ಲಿ ಹಾಜರಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ನನ್ನ ಅಣ್ಣನ ಮಗಳಾಗಬೇಕು. ಚಾಸಾ-1 ರವರು ನನ್ನ ಅಣ್ಣನ ಮಗಳಾಗಿದ್ದರಿಂದ, ಈ ಘಟನೆ ಆಗಿಲ್ಲ ಎಂದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.